ನಿರ್ಣಯವು "ಹೌದು" ಎನ್ನುವವರ ಪರವಾಗಿದೆ

ನಿರ್ಣಯವು "ಹೌದು " ಎನ್ನುವವರ ಪರವಾಗಿದೆ

ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಗಿದೆ.

ಉಪಾಧ್ಯಕ್ಷರು:- ಈಗ ಖಾಸಗಿ ಸದಸ್ಯರ ಕಾರ್ಯಕಲಾಪಗಳನ್ನು ತೆಗೆದುಕೊಳ್ಳುತ್ತೇನೆ.ಶ್ರೀ ಅಭಯ ಪಾಟೀಲ್‌ರವರೆ ತಾವು ಮಾತನಾಡಿ.

13. ಖಾಸಗಿ ಸದಸ್ಯರ ಕಾರ್ಯಕಲಾಪ

ವಿಷಯ : ಬೆಳಗಾವಿಯಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚು ಮಾಡುವ ದೃಷ್ಟಿಯಿಂದ 2000 ಎಕರೆ ಪ್ರದೇಶವನ್ನು ಗುರುತಿಸಿ ಐ.ಟಿ. ಉದ್ಯೋಗಗಳನ್ನು ಸ್ಥಾಪಿಸುವ ಕುರಿತು ಸರ್ಕಾರವು ಬರುವಂತಹ ದಿವಸಗಳಲ್ಲಿ ಪ್ರಾಸಸ್ತ್ಯ ಕೊಡುವ ಬಗ್ಗೆ.

ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ):- ಮಾನ್ಯ ಉಪಾಧ್ಯಕ್ಷರೆ, ಬೆಳಗಾವಿಯಲ್ಲಿಉದ್ಯೋಗಾವಕಾಶಗಳನ್ನು ಹೆಚ್ಚು ಮಾಡುವ ದೃಷ್ಟಿಯಿಂದ ೨೦೦೦ ಎಕರೆ ಪ್ರದೇಶವನ್ನು ಗುರುತಿಸಿ ಐ.ಟಿ. ಉದ್ಯೋಗಗಳನ್ನು ಸ್ಥಾಪಿಸುವ ಕುರಿತು ಸರ್ಕಾರವು ಬರುವಂತಹ ದಿವಸಗಳಲ್ಲಿ ಪ್ರಾಶಸ್ತ್ಯ ಕೊಡುವ ಬಗ್ಗೆ ಸದನವು ಸರ್ಕಾರವನ್ನು ಒತ್ತಾಯಿಸುತ್ತದೆ.

ಉಪಾಧ್ಯಕ್ಷರು:- ಈ ಬಗ್ಗೆ ಚರ್ಚೆಯನ್ನು ನಾಳೇ ತೆಗೆದುಕೊಳ್ಳೋಣ.

ಶ್ರೀ ಅಭಯಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ತಾವು ಈಗ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ಈ ಬಗ್ಗೆ ಎರಡು-ಮೂರು ಜನ ಸದಸ್ಯರುಗಳು ೧೫-೨೦ ನಿಮಷದಲ್ಲಿ ಮಾತನಾಡುತ್ತಾರೆ.

ಶ್ರೀ ಎಸ್.ಸುರೇಶ್ ಕುಮಾರ್:-ಈಗ ಕ್ಯಾಬಿನೆಟ್ ಸಭೆ ಇದೆ.

ಶ್ರೀ ಅಭಯ್ ಪಾಟೀಲ್:- ನಾಳೇ ಬೆಳಗ್ಗೆ ತಾವು ಚರ್ಚೆಗೆ ಫಿಕ್ಸ್ ಮಾಡಿ ಬಿಡಿ.

ಶ್ರೀ ಮಾಲೀಕಯ್ಯ ಗುತ್ತೇದಾರ್:- ನನ್ನದೊಂದು ಗಮನ ಸೆಳೆಯುವ ಸೂಚನೆ ಇತ್ತು.

ಉಪಾಧ್ಯಕ್ಷರು:- ನಾಳೆ ತೆಗೆದುಕೊಳ್ಳೋಣ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು:- ಮಾನ್ಯ ಯೋಗೀಶ್ ಭಟ್ ಅವರು, ನಿರ್ಣಯವನ್ನು ಮಂಡಿಸಿ.

ಶ್ರೀ ಎನ್.ಯೋಗೀಶ್ ಭಟ್(ಉಪಾಧ್ಯಕ್ಷರು):-ಮಾನ್ಯ ಅಧ್ಯಕ್ಷರೆ, ರಾಜ್ಯದ ೩ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ...

ಅಧ್ಯಕ್ಷರು:- ಒಂದು ನಿಮಿಷ, ನಿಮ್ಮದು ನಾಳೆ ತೆಗೆದುಕೊಳ್ಳೋಣ.

ಅಧ್ಯಕ್ಷರು:- ಮಾನ್ಯ ಅಭಯಪಾಟೀಲ್‌ರವರೆ, ತಾವು ಮಾತನಾಡಿ.

ಶ್ರೀ ಅಭಯ್ ಪಾಟೀಲ್:-ಈಗಾಗಲೇ ಐ.ಟಿ. ದೃಷ್ಟಿಯಿಂದ ಬೆಳಗಾವಿ ಜಿಲ್ಲೆಯಲ್ಲಿ ಸುಮಾರು ೪೦ ಎಕರೆ ಜಮೀನಿನಲ್ಲಿ ಒಂದು ಐ.ಟಿ.ಪಾರ್ಕ್‌ನ್ನು ಮಾಡಿದ್ದಾರೆ.ಆದರೆ ಅದು ಸಣ್ಣ ಪ್ರಮಾಣದಲ್ಲಿ ಇರುವುದರಿಂದ ಅಲ್ಲಿ ಮೂಲಭೂತ ಸೌಕರ್ಯಗಳನ್ನು ಬಹಳ ವರ್ಷಗಳಿಂದ ಒದಗಿಸದೆ ಇರುವುದರಿಂದ ಅದು ಕಾರ್ಯರೂಪ ಅಷ್ಟೊಂದು ಸರಿಯಾಗಿ ಆಗಿಲ್ಲ. ನಾವು ಏನು ಹೇಳುತ್ತೇವೆಂದರೆ, ಬೆಳಗಾವಿಯಲ್ಲಿ ವಿಧಾನಸೌಧ ಬಂದಿರುವುದರಿಂದ ಬರುವ ದಿವಸಗಳಲ್ಲಿ ಇಲ್ಲಿ ಉದ್ಯೋಗಗಳನ್ನು ಹೆಚ್ಚು ಮಾಡುವ ದೃಷ್ಟಿಯಿಂದ ಸುಮಾರು ೨೦೦೦ ಎಕರೆ ಜಮೀನನ್ನು ಬೆಳಗಾವಿ ತಾಲ್ಲೂಕು ಅಥವಾ ಖಾನಾಪೂರ ತಾಲ್ಲೂಕು ಇರಬಹುದು, ಇಲ್ಲಿ ಮಧ್ಯೆದಲ್ಲಿ ಗುರುತಿಸಿ ಐ.ಟಿ.ಪಾರ್ಕ್‌ನ್ನು ದೊಡ್ಡ ಪ್ರಮಾಣದಲ್ಲಿ ಮಾಡುವ ದೃಷ್ಟಿಯಿಂದ ಸರ್ಕಾರ ಈ ನಿರ್ಣಯವನ್ನುಅಂಗೀಕಾರ ಮಾಡುವುದಕ್ಕೆ ಆಗ್ರಹ ಮಾಡಿದರೆ ಬಹುತೇಕ ಈ ಭಾಗದಲ್ಲರುವ ನಿರುದ್ಯೋಗಸಮಸ್ಯೆಗೆ ಪರಿಹಾರವನ್ನು ಒದಗಿಸಿದಂತಾಗುತ್ತದೆ. ಏಕೆಂದರೆ ಎಲ್ಲಾ ಉದ್ಯೋಗಗಳನ್ನು

ನೀವು ಇವತ್ತುಬೆಂಗಳೂರಿನಲ್ಲಿ ಹಾಕಿರುವುದರಿಂದ ಇವತ್ತು ಬೆಂಗಳೂರಿನಲ್ಲಿ ಅನೇಕ ಸಮಸ್ಯೆಗಳು ಪ್ರಾರಂಭವಾಗಿರುತ್ತವೆ. ನಾವು ಹೇಳುವುದೇನೆಂದರೆ, ಇವತ್ತು ಐ.ಟಿ.ಇಂಡಸ್ಟ್ರೀಗೆ ದೊಡ್ಡ ಪ್ರಮಾಣದ ಜಾಗವನ್ನು ಒದಗಿಸಿದರೆ ಇನ್‌ಫೊಸಿಸ್ ಇರಬಹುದು, ವಿಪ್ರೋ ಇರಬಹುದು, ಕೊಟ್ಸ್ ಇರಬಹುದು, ಈ ರೀತಿಯ ಅನೇಕ ಕಂಪನಿಗಳವರು ಬೆಳಗಾವಿಗೆ ಬರುವುದಕ್ಕೆ ಅವರು ಮಾನಸಿಕವಾಗಿ ತಯಾರಾಗಿದ್ದಾರೆ.ಅವರಿಗೆ ಲ್ಯಾಂಡ್‌ನ್ನು ಒದಗಿಸಿ ಕೊಡುವ ಬಗ್ಗೆ ಈ ಸಮಯದಲ್ಲಿ ಸರ್ಕಾರವನ್ನು ನಾವು ಸದನದ ಮುಖಾಂತರ ಒತ್ತಾಯಿಸಬೇಕಾಗಿರುತ್ತದೆ. ಬೆಳಗಾವಿಯಲ್ಲಿ ವಿಶೇಷವಾಗಿ foundry cluster ಉದ್ಯೋಗವಿದೆ. Foundry ಇರಬಹುದು, machining ಇರಬಹುದು, ಇಲ್ಲಿರುವ ಜನರು ತಮ್ಮ ಸಾಮರ್ಥ್ಯದಿಂದ ಈ ಉದ್ಯೋಗಗಳನ್ನು ನಿರ್ಮಾಣ ಮಾಡಿದ್ದಾರೆ.ಬೆಳಗಾವಿಯಲ್ಲಿ foundry cluster ಉದ್ಯೋಗ ಭಾರತದಲ್ಲಿರುವಂಥ ೧೦ foundry cluster ನಲ್ಲಿ ಬರುತ್ತದೆ. ನಾನು ಉತ್ತರ ಕರ್ನಾಟಕದ ಬೆಳಗಾವಿಯಲ್ಲಿ ಐ.ಟಿ.ಉದ್ಯೋಗವನ್ನು ಸ್ಥಾಪನೆ ಮಾಡುವ ದೃಷ್ಟಿಯಿಂದ ಎಲ್ಲಾ ಸದಸ್ಯರಲ್ಲಿ ವಿನಂತಿಯನ್ನು ಮಾಡುತ್ತೇನೆ. ವಿಶೇಷವಾಗಿ ಇಂಡಸ್ಟ್ರೀಸ್ ಮಿನಿಸ್ಟರ್‌ರವರು ಈಭಾಗದವರು ಇರುವುದರಿಂದ ಅವರಿಗೂ ನಾವು ಒತ್ತಾಯ ಮಾಡುತ್ತೇವೆ. ಈಗ ಐ.ಟಿ.ಇಂಡಸ್ಟ್ರೀ ಮಾಡುವುದಕ್ಕೆ ನೀವು ಈಗ ಏನು ೪೦-೫೦ ಎಕರೆ ಜಮೀನು earmarkಮಾಡಿರುತ್ತೀರಿ ಅದು ಸಾಕಾಗುವುದಿಲ್ಲ. ಸಣ್ಣ ಸಣ್ಣ ಉದ್ಯೋಗಗಳಿಗೆ ಅದು ಪೂರಕವಾಗಿ ಬೇಕಾಗುತ್ತದೆ.

ಅದಕ್ಕಾಗಿ ೨,೦೦೦ ಎಕರೆಯಲ್ಲಿ ಒಂದು ಪ್ರದೇಶವನ್ನು ಗುರ್ತಿಸಿ, ಐ.ಟಿ ಉದ್ಯೋಗಕ್ಕೆ ಅವಕಾಶ ಮಾಡಿಕೊಟ್ಟರೆ, ಬಹುತೇಕ ಈ ಭಾಗದಲ್ಲಿ ನಿರುದ್ಯೋಗ ಸಮಸ್ಯೆ ಪರಿಹಾರವಾಗುತ್ತದೆ. ಉದಾಹರಣೆಗಾಗಿ ಮಹಾರಾಷ್ಟ್ರ ರಾಜ್ಯದಲ್ಲಿ ಅನೇಕ ಬೇರೆ ಬೇರೆ ನಗರಗಳನ್ನು ಗುರ್ತಿಸಿ, ಪೂನಾ ಇರಬಹುದು, ನಾಸಿಕ್ ಇರಬಹುದು, ಡಾಂಡೇಲಿ ಇರಬಹುದು, ಕೊಲ್ಲಾಪುರ ಇರಬಹುದು, ಅಲ್ಲಿ

ಬೇರೆ ಬೇರೆ ಉದ್ಯೋಗ- ಗಳನ್ನು ಸ್ಥಾಪಿಸುವ ದೃಷ್ಟಿಯಿಂದ, ಜನಸಂಖ್ಯೆ ದೃಷ್ಟಿಯಿಂದ ಇರಬಹುದು, ಒಂದೊಂದು sector ನಿರ್ಮಾಣ ಮಾಡಿದ್ದಾರೆ. ಆದರೆ ನಮ್ಮಲ್ಲಿ ಬೆಂಗಳೂರು ಒಂದನ್ನೇ ಕೇಂದ್ರೀಕೃತ ಮಾಡಿ ನೀವು ಅನೇಕಸಮಸ್ಯೆಗಳನ್ನು ಮಾಡಿಕೊಂಡಿದ್ದೀರಿ. ಇವತ್ತು ಈ ಭಾಗದಲ್ಲಿ ಸದನ ನಡೆಯುತ್ತಿದೆ, ಉದ್ಯೋಗ ದೃಷ್ಟಿಯಿಂದಲೂ ಉತ್ತರ ಕರ್ನಾಟಕಕ್ಕೆ ಹೆಚ್ಚಿನ ಪ್ರಾಶಸ್ತ್ಯ ಈ ಮುಖಾಂತರ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ (ಶಿರಾ) :-ಮಾನ್ಯ ಅಭಯ್ ಪಾಟೀಲ್ ರವರು ಬಹಳ ಒಳ್ಳೆಯ ಉದ್ದೇಶದಿಂದ ಒಂದು ಖಾಸಗಿ ನಿರ್ಣಯವನ್ನು ತಂದಿದ್ದಾರೆ. ಬೆಳಗಾವಿ ಕೂಡ ಒಂದು ಆಡಳಿತ ಕೇಂದ್ರವಾಗಿದೆ. ಹೀಗಾಗಿ ಐ.ಟಿ ಪ್ರವೇಶವನ್ನು ಇಲ್ಲಿ ಮಾಡಬೇಕೆಂಬ ಸದುದ್ದೇಶ ಕೂಡ ಇದೆ. ಅದಕ್ಕೆ ಯಾರ ಅಭ್ಯಂತರ ಕೂಡ ಇಲ್ಲ. ಖಾಸಗಿ ನಿರ್ಣಯ ತರತಕ್ಕಂಥದ್ದು ಒಬ್ಬ ಸದಸ್ಯರ ಹಕ್ಕು. ಅದನ್ನು ತಂದಿದ್ದಾರೆ. ಅದನ್ನು ಸರ್ಕಾರ ಒಪ್ಪಬೇಕಾಗುತ್ತದೆ ಎನ್ನುವುದಕ್ಕಿಂತ ಹೆಚ್ಚಾಗಿ, ಇನ್ನೊಂದು ಬಹಳ ಮುಖ್ಯವಾಗಿರತಕ್ಕಂಥ ಸಂಗತಿ ಎಂದರೆ, ಇಲ್ಲಿ ಸುವರ್ಣಸೌಧ ಕಟ್ಟಿಸಿದ ಮೇಲೆ, ಇದು ಬೆಳಗಾವಿಯಿಂದ ೧೧ ಕಿ.ಮೀ. ದೂರ ಆಗುತ್ತವೆ. ನಮಗೆ ಸಂಗಮ್ ಹೋಟೆಲ್‌ನಲ್ಲಿ ರೂಮ್ ಕೊಟ್ಟಿದ್ದಾರೆ. ಅಲ್ಲಿಂದ ಲೆಕ್ಕ ಹಾಕಿದರೆ ೧೧ ಕಿ.ಮೀ. ದೂರದಲ್ಲಿದೆ. ನಾನು ಖಾಸಗಿಯಾಗಿ ಇಲ್ಲಿನ ಜಮೀನಿನ ಬೆಲೆ ಎಷ್ಟಿರಬಹುದು ಎನ್ನುವುದನ್ನು ವಿಚಾರಿಸುತ್ತಿದ್ದೇನೆ. ಒಂದು ಮಹತ್ವದ ವಿಚಾರ ಮಾನ್ಯ ಅಭಯ್ ಪಾಟೀಲ್‌ರವರಿಗೆಗೊತ್ತಿರಬೇಕು. ಇಲ್ಲಿ ಹೌಸಿಂಗ್ ಬೋರ್ಡ್‌ನವರು ೭೮೬ ಎಕರೆ ಭೂಮಿಯನ್ನು acquire ಮಾಡಬೇಕೆಂಬ ರೀತಿಯಲ್ಲಿ ಎಲ್ಲಾ ಪ್ರಕ್ರಿಯೆಗಳು ಪ್ರಾರಂಭವಾಗಿ, ಅಂತಿಮ ಹಂತದಲ್ಲಿ ೧೦ ಲಕ್ಷದ ೮೬ಸಾವಿರ ರೂಪಾಯಿಗೆ ೭೮೬ಎಕರೆಭೂಮಿಯನ್ನು ಕೊಂಡುಕೊಳ್ಳ-ಬೇಕೆನ್ನುವ ನಿರ್ಣಯ ಕೂಡ ಆಗಿದೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎನ್.ಯೋಗೀಶ್ ಭಟ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಿರ್ಣಯ ಆದ ಮೇಲೆ ಜಮೀನಿನ ಬೆಲೆ ಜಾಸ್ತಿಯಾಯಿತು. ಜಾಸ್ತಿಯಾದ ನಂತರ de-notification pressure ಜಾಸ್ತಿಯಾಗಿದೆ. ಸರ್ಕಾರದಲ್ಲಿ ಒಂದು ಕಡೆ notification ಇನ್ನೊಂದು ಕಡೆ de-notification. Notificationಗಿಂಥ ಹೆಚ್ಚಾಗಿ de-notification ಗೆ ಹೆಚ್ಚಿನ ಮಹತ್ವ ಇರತಕ್ಕಂಥದ್ದು, ಈ ಸರ್ಕಾರದಲ್ಲಿ. ಅಂದರೆ ನಿಮ್ಮ ಸರ್ಕಾರದಲ್ಲಿ. ನಿಜವಾಗಿಯೂ ನಿಮಗೆ ಐ.ಟಿ ಬಗ್ಗೆ ಕಾಳಜಿ ಇದ್ದರೆ, ಹೌಸಿಂಗ್ ಬೋರ್ಡ್‌ನವರು ಈಗಾಗಲೇ ೮೦೦ ಎಕರೆ ಭೂಮಿ acquire ಮಾಡುವಂತಹ ಪ್ರಕ್ರಿಯೆ ಮುಗಿದಿರುವಂತಹ ಸಂದರ್ಭದಲ್ಲಿ, ನಿಮ್ಮ ಪಕ್ಷದವರೆ ಎಲ್ಲರೂ de-notify ಮಾಡುವುದಕ್ಕೆ pressure ಹಾಕುತ್ತಿರುವುದು. ನಾನು ಹೆಸರು ಹೇಳಬಲ್ಲೆ. ಯಾರ್‍ಯಾರು ಯಾವಾಗ ಕಾಗದ ಬರೆದಿದ್ದಾರೆ ಎನ್ನುವ ಕಡತವನ್ನೂ ನಾನು ನೋಡಿದ್ದೇನೆ. ಆದರೆ ಇಲ್ಲಿ ಹೆಸರು ಹೇಳುವುದು ಬೇಡ. ಹಾಗಾಗಿ ನೀವು ೮೦೦ ಎಕರೆ ಭೂಮಿಯನ್ನು ತೆಗೆದುಕೊಂಡಿದ್ದೀರಿ ಆದರೆ, ಐ.ಟಿ ಗೂ ಕೊಡಬಹುದು, ಯಾವುದಕ್ಕಾದರೂ ಕೊಡಬಹುದು. ನಿಮ್ಮ ಸರ್ಕಾರದಲ್ಲಿ ನೀತಿ ನಿಯಮ ಏನೂ ಇಲ್ಲ. ನೀವು ಯಾವುದಕ್ಕಾದರೂತೆಗೆದುಕೊಳ್ಳಬಹುದು, ಯಾವುದಕ್ಕಾದರೂ ಹಂಚಬಹುದು. ಈಗ ಈ ಮಾತನ್ನು ಹೇಳಿದರೆ ಮಾನ್ಯ ನಿರಾಣಿಯವರಿಗೆ ಸಿಟ್ಟು ಬರಬಹುದು. ಸಿಟ್ಟು ಬರಿಸುವುದಕ್ಕೆ ಹೋಗುವುದಿಲ್ಲ. ನೀವು ಒಳ್ಳೆಯ ಉದ್ದೇಶದಿಂದ ಖಾಸಗಿ ನಿರ್ಣಯವನ್ನು ತಂದಿದ್ದೀರಿ. ಮಾಡಿ. ಕೊನೆಪಕ್ಷ ಇದಕ್ಕೆ ಬೆಂಬಲವಾಗಿ ಆ ೮೦೦ ಎಕರೆಯನ್ನು ಏನಾದರೂ acquire ಮಾಡಿಸಿದರೆ, ಐ.ಟಿ ಗೂ ಕೂಡ ಸಹಾಯವಾ-ಗುತ್ತದೆ, ಹೌಸಿಂಗ್ ಬೋರ್ಡ್‌ಗೂ ಸಹಾಯವಾಗುತ್ತದೆ. ನಾಳೆ ಶಾಸಕರ ಭವನ ಅಥವಾ ಇನ್ನೊಂದು ಭವನವನ್ನೋ ಕಟ್ಟುವುದಕ್ಕೆ ಸಾಧ್ಯವಾಗುತ್ತದೆ. ಬೆಳಗಾಂ ಹೈವೇಯಿಂದ ಆ ಕಡೆ improve ಆಗಿದೆ. ಒಂದು new Belgaum ಆಗುವುದಕ್ಕೂ ಅವಕಾಶ ಆಗುತ್ತದೆ. ಆದ್ದರಿಂದ ಈ ನಿರ್ಣಯ ಕೊನೆ

ಪಕ್ಷಹೌಸಿಂಗ್ ಬೋರ್ಡ್‌ಗದರೂಸಹಾಯವಾಗಿ ಬರುತ್ತದೆಯೇ ಎನ್ನು-ವುದನ್ನು ನೋಡಬೇಕು. ಈ ವಿಚಾರತಮಗೆ ಗೊತ್ತಿರುವುದಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರ ಮುಖಾಂತರ ಸಭೆಯಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಕೊನೆ ಪಕ್ಷ ೮೦೦ ಎಕರೆ acquire ಮಾಡುವಂತಹ ಕೆಲಸ ಮಾಡಿ. ಯಾವುದೇ ಕಾರಣಕ್ಕೂde-notification ಮಾಡಿಸುವುದಕ್ಕೆ ಹೋಗಬೇಡಿ. Notify ಮಾಡುವ ಆ ಹಂತದಲ್ಲಿಯೇ ಆಗಲೇde-notification ಪ್ರಕ್ರಿಯೆ ಪ್ರಾರಂಭವಾ-ಗುತ್ತಿದೆ. ಅದಕ್ಕೆ ಅವಕಾಶ ಕೊಡಬೇಡಿ. ದಯಮಾಡಿ ಅದರ ಬಗ್ಗೆ ಏನಾದರೂ ಖಾಸಗಿ ನಿರ್ಣಯದಲ್ಲಿ ಮಾನ್ಯ ಸಚಿವರು ಉತ್ತರ ಕೊಡುವುದಾದರೆ, ನಾವು de-notify ಮಾಡುವುದಿಲ್ಲವೆನ್ನುವ ಮಾತು ಹೇಳಿದರೆ ನಾನು ಧನ್ಯ.

ಶ್ರೀ ಅಭಯ್ ಪಾಟೀಲ್:-ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಜಯಚಂದ್ರರವರು ಹೇಳಿದ ಹಾಗೆ, ಇದರ ಪಕ್ಕದಲ್ಲಿಯೇ ೮೦೦ ಎಕರೆ ಭೂಮಿಯನ್ನು ಹೌಸಿಂಗ್ ಬೋರ್ಡ್‌ನವರು acquisition ಮಾಡಿದ್ದಾರೆ. ಯಾವಾಗ ೪(೧) ಆಯಿತೋ ಆಗಿಂದ ಅದನ್ನು ಬಿಡಬೇಕೆಂದು ರೈತರು ಹೋರಾಟಮಾಡುತ್ತಿದ್ದಾರೆ. ಅದುಬೆಳಗಾವಿಗ್ರಾಮೀಣ ಮತ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ವಿಷಯವಾಗಿದೆ. ಬೆಳಗಾವಿಯಲ್ಲಿ ಹೆಚ್ಚು ಉದ್ಯೋಗ ಸೃಷ್ಟಿಯಾಗಬೇಕು ಎಂಬುದು ನನ್ನ ಕಳಕಳಿ. ನಾನು ಇಲ್ಲಿ ಪ್ರಸ್ತಾಪ ಮಾಡಬಾರದು, ಆದರೂ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಕಾವೇರಿ ವಿಚಾರದ ಬಗ್ಗೆ ನಮಗೆ ಎರಡು ಮಾತಿಲ್ಲ. ನಮಗೂ ಕಾವೇರಿ ನದಿ ನೀರಿನ ಬಗ್ಗೆ ಆಸಕ್ತಿ ಇದೆ. ಆದರೆ ನಾಲ್ಕೂ ದಿವಸದಿಂದ ನೋಡುತ್ತಿದ್ದೀರಿ, ಜನ, ಬೆಳಗಾವಿ ಬಗ್ಗೆ ಏನು ಮಾಡುತ್ತಿದ್ದೀರಿ? ನೀವುಬೆಳಗಾವಿಯಲ್ಲಿ ಕೇವಲ ನಿಮ್ಮ ಸ್ವಾರ್ಥಕ್ಕೋಸ್ಕರ ಅಧಿವೇಶನ ಮಾಡುತ್ತಿದ್ದೀರಿ ಎಂದು ಕೇಳುತ್ತಿದ್ದಾರೆ. ಇಲ್ಲಿನ ಸಾವಿರಾರು ಹುಡುಗರು ಉದ್ಯೋಗ ದೃಷ್ಟಿಯಿಂದ ಪೂನಾಗೆ ಹೋಗುತ್ತಿದ್ದಾರೆ. ನಮ್ಮಲ್ಲಿ ಬೆಂಗಳೂರಿನವರಿಗಿಂತ ಹೆಚ್ಚು talent ಇರುವವರು ಇದ್ದಾರೆ. ಅದಕ್ಕೆ ನೀವು ಅವಕಾಶ ಮಾಡಿಕೊಡಿ. ಆಮೇಲೆ ನೋಡಿ. ಆದರೆ ಉಳಿದ ರಾಜಕಾರಣದಲ್ಲಿ ಇದನ್ನು

ಬಿಡುವ ಹಾಗೆ ಇಲ್ಲ. ಆದರೆ ನಿಮ್ಮ ದೃಷ್ಟಿಕೋನ ಬೇರೆ ಇರಬಹುದು. ಒಟ್ಟಾರೆ ನಾವು ೨,೦೦೦ ಎಕರೆ ಭೂಮಿಯನ್ನು ಏಕೆ ಕೇಳುತ್ತಿದ್ದೇವೆ ಎಂದರೆ, ಹುಬ್ಬಳ್ಳಿಯಲ್ಲಿ ಐ.ಟಿ ಪಾರ್ಕ್ ನೋಡಿರಬಹುದು, ಬೆಳಗಾವಿಯಲ್ಲಿ ನೋಡಿರಬಹುದು, ೫೦-೧೦೦ ಎಕರೆಯೊಳಗೆ ಎಲ್ಲಿಯೂ success ಆಗುತ್ತಿಲ್ಲ. ಅದಕ್ಕೆ ಚಿಂತನೆ ಮಾಡಿ ಈ ರೀತಿ ಒಂದು ನಿರ್ಣಯ ಮಾಡಿದರೆ ಬಹುತೇಕ ಬೆಳಗಾವಿಯಲ್ಲಿ, ಬಹುತೇಕ ಉತ್ತರ ಕರ್ನಾಟಕಕ್ಕೆ ಅನುಕೂಲವಾಗುತ್ತದೆ. ಆ ದೃಷ್ಟಿಯಿಂದ ನಾವು ಸರ್ಕಾರ ಇರಬಹುದು, ವಿರೋಧ ಪಕ್ಷದವರು ಇರಬಹುದು, ಒಟ್ಟಾರೆ ಇಬ್ಬರ ಜಗಳದಲ್ಲಿ ಕೂಸು ಬಡವಾಗಬಾರದು. ಆ ದೃಷ್ಟಿಯಿಂದ ಮಾನ್ಯ ಜಯಚಂದ್ರರವರು ವಿಚಾರ ಮಾಡಬೇಕು.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಅಭಯ್ ಪಾಟೀಲ್‌ರವರೆ ನನ್ನ ಮಾತನ್ನು ಅಪಾರ್ಥ ಮಾಡಿಕೊಳ್ಳಬೇಡಿ. ಯಾವುದೇ ಕಾರಣಕ್ಕೂ ೨,೦೦೦ ಎಕರೆ ಭೂಮಿಯನ್ನು acquireಮಾಡುವುದಕ್ಕೆ ಅಥವಾ ಐ.ಟಿ. ಪಾರ್ಕ್ ಮಾಡುವುದಕ್ಕೆ ನಮ್ಮ ವಿರೋಧ ಇಲ್ಲ. ನಿರ್ಣಯಕ್ಕೆ ನಾವೂ ಕೂಡ ಬೆಂಬಲ ಕೊಡುತ್ತೇವೆ. ಸರ್ವಾನುಮತದಿಂದ ನಿರ್ಣಯವಾಗಲಿ. ಆದರೆ ಎಚ್ಚರಿಕೆ ಮಾತನ್ನು ಏಕೆ ಹೇಳಿದೆ ಎಂದರೆ, ನಿಮಗೂ ಗೊತ್ತಿದೆ ೮೦೦ ಎಕರೆ ಭೂಮಿde-notification ಮಾಡುವುದಕ್ಕೆ ಹೊರಟಿದ್ದಾರೆ ಎಂದರೆ, ಅದರ ಬಗ್ಗೆ ಸ್ವಲ್ಪ ಎಚ್ಚರಿಕೆ ಇರಲಿ.De-notificationಮಾಡಿಸುವುದಕ್ಕೆ ಜನರು ಇರುತ್ತಾರೆ ಅದಕ್ಕೆ ಹೋಗಬೇಡಿ. ನಾಳೆ ೨,೦೦೦ ಎಕರೆ ನೀವು ಹೇಳಿದಂತೆ ಪ್ರಕ್ರಿಯೆ ಮಾಡಿ ಮತ್ತೆ de-notification ದಂಧೆ ಶುರು ಆಗಬಾರದು. ನೀವೇ ಗೊಂದಲದಲ್ಲಿ ಇರಬಾರದು. ಆಯಿತು. ನಿಮ್ಮ ಆಸೆಯಂತೆ ಇದು ನೆರವೇರಲಿ. ಬೆಂಗಳೂರು ಅಲ್ಲ, ಬೆಂಗಳೂರಿಗೆ ಪರ್ಯಾಯವಾಗಿ ಬೆಳಗಾವಿ ಬೆಳೆಯಬೇಕೆಂಬ ದೃಷ್ಟಿಯಿಂದಲೇ ಇವತ್ತು ಈ ದೊಡ್ಡ ಸುವರ್ಣಸೌಧವನ್ನು ಕಟ್ಟಿರುವುದು. ಬೆಳಗಾವಿ ಪರ್ಯಾಯ ನಗರವಾಗಿ ಬೆಳೆಯಬೇಕು. ಐ.ಟಿ ಕ್ಷೇತ್ರದಲ್ಲಿಯೂ ಕೂಡ ಮುಂದೆ ಬರಬೇಕು. ಅದಕ್ಕೆ ನಮ್ಮ ಸಂಪೂರ್ಣವಾದಂತಹ ಬೆಂಬಲವಿದೆ. ಆದರೆ ಒಂದು ಮಾತನ್ನು

ಹೇಳುತ್ತೇನೆ.ಇದು ಕಾಕತಾಳೀಯ, ಇವತ್ತು ಇಲ್ಲಿ ವಿಧಾನಸಭೆ ನಡೆಯ-ಬೇಕಾದಾಗ, ಸುಪ್ರೀಂಕೋರ್ಟ್‌ನವರು ತೀರ್ಮಾನ ಕೊಡುತ್ತಾರೆ. ಇಲ್ಲಿ ಚರ್ಚೆಯಾಗುತ್ತದೆ. ಅನಿವಾರ್ಯವಾಗುತ್ತದೆ. ರಾಜ್ಯದ ಹಿತದೃಷ್ಟಿಯಿಂದ ಕಾವೇರಿ ಇರಬಹುದು, ಕೃಷ್ಣ ಇರಬಹುದು, ಅದು ಪ್ರಶ್ನೆ ಅಲ್ಲ. ವಿಧಾನಸೌಧ ಎಷ್ಟೋ ಸುವರ್ಣ ಸೌಧ ಕೂಡ ಅಷ್ಟೇ ಸರಿಯಾಗುತ್ತದೆ. ಇದು ರಾಜ್ಯದ ಸಮಸ್ಯೆ ಬಗ ಹರಿಸುವುದಕ್ಕೆ ಇರುವುದು. ಆದರೆ ಈ ಭಾಗದ ಜನರೂ ಕೂಡ ಕಾವೇರಿ ಸಮಸ್ಯೆ ಎಷ್ಟಿದೆ ಎಂದು ಅರ್ಥ ಮಾಡಿಕೊಳ್ಳುವುದಕ್ಕೆ ಈ ಸದನದ ಮುಖೇನ ಒಂದು ಅವಕಾಶವಾಗಿದೆ. ನಾವು ನಾಳೆ ನಿಯಮ ೬೦ ರಡಿಯಲ್ಲಿ ನಿಲುವಳಿ ಸೂಚನೆಯನ್ನು ತಂದಿದ್ದೇವೆ. ಇವತ್ತು ಮಂಡನೆ ಮಾಡಿದಾಗ, ನಾಳೆ ಚರ್ಚೆಗೆ ಅವಕಾಶ ಕೊಟ್ಟಿದ್ದಾರೆ. ಕಾವೇರಿಯಲ್ಲಿ ಕೇವಲ ೨೭೦ ಟಿ.ಎಂ.ಸಿ ನೀರು ಇದೆ. ಕೃಷ್ಣಾದಲ್ಲಿ ೯೧೧ ಟಿ.ಎಂ.ಸಿ. ನೀರು ಇದೆ. ನಿಜ. ನಾವು ವಿರೋಧ ಪಕ್ಷವಾಗಿ ರಬಹುದು, ನಾಳೆ ನಾವು ಯಾವ ವೇಗದಲ್ಲಿ support ಮಾಡುತ್ತೇವೆ, ಏನು ಮಾಡುತ್ತೇವೆ ಎನ್ನುವುದನ್ನು ನಾಳೆಚರ್ಚೆ ಮಾಡುವಾಗ ನೋಡಿ. ನಮ್ಮ ಸಂಪೂರ್ಣ ಸಹಕಾರ ಇದೆ. ೯೧೧ ಟಿ.ಎಂ.ಸಿ ನೀರೂ ಕೂಡ ಬಳಕೆಯಾಗಬೇಕು ಎನ್ನುವುದರಲ್ಲಿ ಕಾವೇರಿಯಷ್ಟೇ ಕಳಕಳಿ ಇವತ್ತು ಕೃಷ್ಣಾ ನೀರಿನಲ್ಲಿ ಕೂಡ ಇದೆ ಎನ್ನುವುದನ್ನು ಮಾನ್ಯ ಸದಸ್ಯರಿಗೆ ತಮ್ಮ ಮುಖೇನ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಮುರುಗೇಶ್ ಆರ್.ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು): ಇವತ್ತು ಸ್ನೇಹಿತರಾದಂತಹ ಮಾನ್ಯ ಅಭಯ್ ಪಾಟೀಲ್‌ರವರು ಖಾಸಗಿ ನಿರ್ಣಯ ತಂದಿರುವುದು ಬಹಳ ಸೂಕ್ತ ಇದೆ. ನಮ್ಮ ಸರ್ಕಾರ ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ, ಬೆಂಗಳೂರು ಮತ್ತು ಉತ್ತರ ಕರ್ನಾಟಕದ ಅಭಿವೃದ್ಧಿ ದೃಷ್ಟಿಯಿಂದ ಬಹಳ ತಾರತಮ್ಯ ಆಗುತ್ತಿರುವುದನ್ನು ನಾವು ಮೊದಲಿನಿಂದಲೂ ನೋಡಿಕೊಂಡು ಬರುತ್ತಿದ್ದೇವೆ. ಅದರಲ್ಲಿ ಮುಖ್ಯವಾಗಿ ಉತ್ತರ ಕರ್ನಾಟಕದಲ್ಲಿ infrastructure ಇಲ್ಲದೇ ಇರುವುದರಿಂದ ಈ ಕಡೆ

ಹೆಚ್ಚಿಗೆ ಯಾವುದೇ ರೀತಿಯ ಕೈಗಾರಿಕೆಗಳು ಬರದೇ ಇರುವುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಉದಾಹರಣೆಗಾಗಿ ಯಾರಾದರೊಬ್ಬರು I.T sector ನಲ್ಲಿ ಬಂಡವಾಳ ಹೂಡಲಿಕ್ಕೆ ಮುಂದೆ ಬಂದರೆ, ಅವರು internationalflight ನಿಂದಲೇ ಬೆಂಗಳೂರಿಗೆ ಬರುತ್ತಾರೆ. ಬೆಂಗಳೂರಿನಿಂದ ಅವರು train, bus,vehicles ನಿಂದ ಬರುವುದಕ್ಕಾಗುವುದಿಲ್ಲ. ಅವರಿಗೆ minimum ಆದರೂ flight ಬೇಕಾಗುತ್ತದೆ. Flight ಒಂದು ವರ್ಷದಲ್ಲಿ ಒಂದು ತಿಂಗಳು ಪ್ರಾರಂಭವಾಗಿರುತ್ತದೆ, ಹನ್ನೊಂದು ತಿಂಗಳು close ಆಗಿರುತ್ತದೆ. ಸುದೈವಕ್ಕೆ ನಮ್ಮ ಸರ್ಕಾರದಿಂದ ಪ್ರಯತ್ನ ಮಾಡಿ, ಸಾಕಷ್ಟು ಬಾರಿ Civil Aviation Minister ರವರನ್ನು personal ಆಗಿ ಭೇಟಿ ಮಾಡಿ ಮತ್ತು ಸನ್ಮಾನ್ಯ ಮುಖ್ಯಮಂತ್ರಿಯವರ ಕಡೆಯಿಂದಲೂ ಅವರಿಗೆ ವಿನಂತಿ ಮಾಡಿಕೊಂಡಾಗ, ಕ್ಯಾಪ್ಟನ್ ಗೋಪಿನಾಥ್‌ರವರ ಕಡೆಯಿಂದ ೫ sectors ನಲ್ಲಿ ಅವರು flight ಓಡಿಸಬೇಕು ಎಂದು ಮಾಡಿದ್ದಾರೆ. Minimum viability ಆಗಲಿಕ್ಕೆ ಎಷ್ಟು seatಗಳ ಕೊರತೆ ಬರುತ್ತದೆ, ಅದನ್ನು ಸರ್ಕಾರದಿಂದ ಭರಿಸುವಂತಹ ವಿನಂತಿ ಮಾಡಿದ್ದೇವೆ. ಉದಾಹರಣೆಗಾಗಿ ಬೆಂಗಳೂರಿನಿಂದ ಬೆಳಗಾಂ ಮತ್ತು ಬಾಂಬೆಗೆ ಹೋಗುವಂಥದ್ದು,ಬೆಂಗಳೂರಿನಿಂದ ಹುಬ್ಬಳ್ಳಿ ಮುಖಾಂತರ ಬಾಂಬೆಗೆ ಹೋಗುವಂಥದ್ದು, ಮೈಸೂರಿನಿಂದ ಬಾಂಬೆಗೆ ಹೋಗುವಂಥದ್ದು, ಬೆಂಗಳೂರಿನಿಂದ ಗುಲ್ಬರ್ಗಾಗೆ ಬರುವಂಥದ್ದು, ಹೀಗೆ ೫ scheduleಗಳನ್ನು flight ನಲ್ಲಿ ಮಾಡಿದ್ದಾರೆ. ಉತ್ತರ ಕರ್ನಾಟಕದಲ್ಲೂ ಸಹಿತ ಬೇರೆ ಬೇರೆ ಕೈಗಾರಿಕೆಗಳು ಬರುವುದಕ್ಕೆ ಮತ್ತು ಬೇರೆ ಬೇರೆ ಸಾರ್ವಜನಿಕರಿಗೆ ಹೋಗಿ ಬರುವುದಕ್ಕೆ ಅನುಕೂಲವಾಗುತ್ತದೆ ಮತ್ತು ಸಮಯದ ಉಳಿತಾಯವಾಗುತ್ತದೆ.

ಈ ಎಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು ಮಾನ್ಯ ಶಾಸಕರು ವಿನಂತಿಯನ್ನು ಮಾಡಿದ್ದಾರೆ. ಕಳೆದ ೧೫ ದಿವಸದಿಂದ ಬೆಂಗಳೂರು-ಬಾಂಬೆ flight ಪ್ರಾರಂಭವಾಗಿದೆ. ಕೇವಲಬೆಂಗಳೂರು-ಬಾಂಬೆ flight ಇಷ್ಟೇ ಆದರೂ I.T.Sectorನಲ್ಲಿಸಾಧ್ಯವಾ- ಗುವುದಿಲ್ಲ. ಬೆಂಗಳೂರಿನಿಂದ ಬಾಂಬೆಗೆ ಹೋಗ

ುವುದು ಆದಾಗ, ನಮಗೆ ಬೆಳಗಾಂ-ಬಾಂಬೆ ಆದಾಗ ನಮಗೆ ಇನ್ನು ಹೆಚ್ಚುಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರವು ಕಾಳಜಿ ವಹಿಸುವುದನ್ನು ಮಾಡುತ್ತಿದೆ.ಇದರ ಜೊತೆಜೊತೆಗೆ ೧೯೬೫ರಲ್ಲಿಯೇ ಜಪಾನ್‌ನಲ್ಲಿ ಜೈಕಾ ಕಂಪನಿಯವರು high speed trainಗಳನ್ನು implement ಮಾಡಿದ್ದಾರೆ. ಅಂದಾಜು ಸುಮಾರು ೪೫-೫೦ ವರ್ಷಗಳ ಹಿಂದೆಯೇ ಅಲ್ಲಿರುವಂತಹ ಡಾ:ಹೆಲ್ಸನ್ ಎಂಬುವವರು ಇನ್ನೂ ಜೀವಂತವಾಗಿದ್ದಾರೆ. ನಾನು ಮತ್ತು ರಾಜುರವರು ಕೂಡ ಒಟ್ಟಿಗೆ ಹೋಗಿ ಭೇಟಿ ಮಾಡಿ ಬಂದಿದ್ದೇವೆ. ಅಲ್ಲಿ ಸಮಯದಅಳತಾಯವನ್ನುಮಾಡುವುದಕ್ಕೆ ಮಾಡಿದ್ದಾರೆ. ನಮ್ಮ ಕರ್ನಾಟಕದಲ್ಲಿ-ಯೂ ಸಹಿತ ಈ ಮೂಲಭೂತ ಸೌಕರ್ಯವನ್ನು ಒದಗಿಸುವಂತಹ ನಿಟ್ಟಿನಲ್ಲಿ ಮೊದಲನೆಯ ಹಂತದಲ್ಲಿ ಅವರು ಚೈನ್ನೈನಿಂದ ಬೆಂಗಳೂರಿಗೆ high speed train ಬರುತ್ತಿದೆ. ಅದನ್ನು ಬೆಂಗಳೂರಿನಿಂದ ಮೈಸೂರುವರೆಗೆ extension ಮಾಡುವುದು. ಇನ್ನು ಎರಡನೆಯದಾಗಿ ಹುಬ್ಬಳ್ಳಿಯಿಂದ ಬೆಳಗಾಂಗೆ ಮೊದಲನೆಯ ಹಂತದಲ್ಲಿ ಅದನ್ನು ಮಾಡುವುದಕ್ಕೆ project reportಗಳನ್ನು ತಯಾರು ಮಾಡುತ್ತಿದ್ದೇವೆ. ಅದನ್ನು ಎರಡನೇ ಹಂತದಲ್ಲಿ ಬೆಂಗಳೂರಿನಿಂದ ಹುಬ್ಬಳ್ಳಿಗೆ connection ಮಾಡುವಂತಹದ್ದು ಆಗಬೇಕು. ಬೆಂಗಳೂರಿನಿಂದಗುಲ್ಬರ್ಗಾಕ್ಕೆ ಮಾಡಬೇಕು.ಮೂರನೆಯ ಹಂತದಲ್ಲಿ in between connection ಗಳನ್ನು ಮಾಡುವಂತಹದ್ದು ಇದೆ. ಇದಕ್ಕೆ ಅಂದಾಜು ವೆಚ್ಚ ಒಂದು ಕಿ.ಮೀಟರ್‌ಗೆ ೨೦೦ ಕೋಟಿ ರೂಪಾಯಿ- ಗಳಷ್ಟು ಖರ್ಚಾಗುವಂತಹ ಸಾಧ್ಯತೆ ಇದೆ. ಇದಕ್ಕೆ ಸಂಪೂರ್ಣವಾಗಿರುವಂತಹ ಖರ್ಚನ್ನು ಜೈಕಾ ಕಂಪನಿಯವರೆ World Bank ಕಡೆಯಿಂದ financial assistance ತೆಗೆದುಕೊಂಡು ಸಂಪೂರ್ಣವಾಗಿ investment ಮಾಡಿಕೊಂಡು ಎಷ್ಟು ವರ್ಷದವರೆಗೆ ಅದನ್ನು complete ಮಾಡಿ ಅವರು ಉಪಯೋಗ ಮಾಡಿಕೊಂಡು BOOT systemನಲ್ಲಿ ನಮಗೆ ವಾಪಸ್ಸು ಕೊಡುವುದಕ್ಕೆ ಒಪ್ಪಿ- ಗೆಯನ್ನು oral ಆಗಿ ಸೂಚಿಸಿದ್ದಾರೆ. ನಮ್ಮ

ಸರ್ಕಾರದ ಕರ್ತವ್ಯ ಮತ್ತು ನಮ್ಮ ಜವಾಬ್ದಾರಿ ಇರುವಂತಹದ್ದು ಆ ಭೂಮಿಯನ್ನು acquisition ಮಾಡಿಕೊಂಡು ಅದನ್ನು ಅವರಿಗೆ handover ಮಾಡಿದ್ದೆ ಆದರೆ ಅವರು ಇದನ್ನು ಸಂಪೂರ್ಣವಾಗಿರುವಂತಹ high speed trainಗಳನ್ನು ಮಾಡುವುದಕ್ಕೆ ಅವರು ಬದ್ಧರಾಗಿದ್ದಾರೆ. ಮತ್ತು land acquisitionಮಾಡಿಕೊಂಡು ಅದಕ್ಕೆ HUDCO ದಿಂದ compensation ಕೊಡುವಂತಹದ್ದುಆಗಬೇಕು. ಹಿಂದೆ ನಮ್ಮ ಇಲಾಖೆಯ Principal Secretary ಆಗಿದ್ದ ಶ್ರೀ ವಿ.ಪಿ.ಬಳಿಗಾರ್‌ರವರು HUDCOದ CMD ಆಗಿರುವುದರಿಂದ ಅದನ್ನು budgetary support ಮೇಲೆ ೧೦ ವರ್ಷದ ಅವಧಿಯೊಳಗೆ ಲೋನ್‌ಗಳನ್ನು ಕೊಡುವುದಕ್ಕೂ ಕೂಡ ಅವರು ಈ ಕರ್ನಾಟಕದ ಅಭಿವೃದ್ಧಿಗೆ ಸೋಸ್ಕರವಾಗಿ ಹೇಳಿರುವುದನ್ನು ನಾವು ಇಲ್ಲಿ ನೆನೆಸಿಕೊಳ್ಳಬೇಕಾಗುತ್ತದೆ. ಈ ರೀತಿಯ ಮೂಲಭೂತ ಸೌಕರ್ಯಗಳನ್ನು ನಮ್ಮ ಭಾಗದಲ್ಲಿ ಮಾಡಿರುವುದರಿಂದ ವಿಮಾನಗಳನ್ನು ಮಾಡುವಂತಹದ್ದು, ರೈಲ್ವೆ ೃಗಳನ್ನು ಮಾಡುವಂತಹದ್ದು ಅದರ ಜೊತೆಗೆ ಪೋರ್ಟ್‌ಗಳನ್ನು ಅಭವೃದ್ಧಿ ಮಾಡುವಂತಹದ್ದು ಆಗಬೇಕು. ಈ ಭಾಗ-ದಲ್ಲಿರುವಂತಹ ಕಾರವಾರ, ತದಡಿ ಪೋರ್ಟ್‌ಗಳನ್ನು ನಾವು ಆಭವೃದ್ಧಿಪಡಿಸುವುದಕ್ಕೆ ಈಗಾಗಲೇ expression of interest ಗಳನ್ನು ಕರೆದಿದ್ದೇವೆ. ಇವೆಲ್ಲವುಗಳ ಹಿನ್ನೆಲೆಯಲ್ಲಿ ಇದು ಆದಾಗ ಮಾತ್ರ ಉತ್ತರ ಕರ್ನಾಟಕವು ಅಭವೃದ್ಧಿ ಹೊಂದುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಬೆಂಗ ಳೂರಿನಿಂದ ನಾವು ಏನಾದರೂ export and import ಮಾಡಬೇಕಾದರೆಹೆಚ್ಚಾಗಿ ನಾವು ಚೈನ್ನೈ ಪೋರ್ಟ್ ಮತ್ತು ಮಂಗಳೂರು ಪೋರ್ಟ್‌ಗಳನ್ನು ನಾವು ಅವಲಂಬನೆ ಮಾಡಬೇಕಾಗುತ್ತದೆ.ಇವತ್ತು ಹೆಚ್ಚು industriesಗಳು ಚೈನ್ನೈನಲ್ಲಿ ಬರುತ್ತಿರಬೇಕಾದರೆ ನಮ್ಮಲ್ಲಿ ಹೆಚ್ಚು ಅನುಕೂಲತೆ ಇದ್ದರೂ ಸಹಿತ ಅಲ್ಲಿ port ಇರುವುದರಿಂದ ಆ ಭಾಗಕ್ಕೆ ಹೆಚ್ಚಿನ ಜನರು ಆ ಭಾಗಕ್ಕೆ ಹೋಗುತ್ತಿದ್ದಾರೆ.ನಾವು ಬೆಂಗಳೂರಿನಿಂದ ಮಂಗಳೂರು ಪೋರ್ಟ್‌ಗೆ ಹೋಗು-ವುದಕ್ಕೆ ಅಲ್ಲಿ ಒಂದು ನಮ್ಮ ಹಾಸನದಿಂದ ಮುಂದೆ ಇರುವ

ಶಿರಾಡಿಘಾಟ್‌ನಲ್ಲಿ ಒಂದು ಟನಲ್ ಮಾಡುವುದರಿಂದ ನಾವು ಸಮಯದ ಉಳಿತಾಯವನ್ನು ಮಾಡಬಹುದು ಮತ್ತು ಅತ್ಯಂತ ಕಡಿಮೆ ಸಮಯದಲ್ಲಿ ಬೆಂಗಳೂರಿನಿಂದ export ಮಾಡುವಂತಹ ವಸ್ತುಗಳನ್ನು ಮಂಗಳೂರು ಪೋರ್ಟಿಗೆ ಮುಟ್ಟಿಸುವುದಕ್ಕೆ ಸಾಧ್ಯವಿದೆ ಮತ್ತು ಅಲ್ಲಿಂದ import ಮಾಡುವುದಕ್ಕೂ ಸಾಧ್ಯವಿದೆ. ಇದಕ್ಕೂ ಸಹ ಜೈಕಾ ದವರು ಟೆಂಡರ್‌ಗಳನ್ನು ಕರೆಯುವಂತಹದ್ದು ಅವರ ಜೊತೆಯಲ್ಲಿ ಮಾತುಕತೆಯನ್ನು ಮಾಡುತ್ತಿದ್ದೇವೆ. ಈ ರೀತಿಯಾಗಿನಾವು ಮೂಲಭೂತ ಸೌಕರ್ಯಗಳಿಗೆಗಮನಕೊಟ್ಟಿದ್ದೇವೆ. ಇವೆಲ್ಲವನ್ನು ನಾವು ಆಧಾರವಾಗಿಟ್ಟುಕೊಂಡು ನಾವು ಏನು Global Investors' Meet ಮಾಡಿದ್ದೇವೆ. ಜಾಗತೀಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಮಾಡಿದ್ದೇವೆ.ಅದರಲ್ಲಿ ಹೆಚ್ಚಿಗ್ಗೆ ೭೫%ನಷ್ಟು ಹೆಚ್ಚಿನ ಯೋಜನೆಗಳು ಉತ್ತರಕರ್ನಾಟಕದಲ್ಲಿ ಬಂದಿದೆ. ಅದರಲ್ಲಿ ೫ ವರ್ಷದ ಅವಧಿಯಲ್ಲಿ ಈ ಅಂದಾಜು ೭೫-೭೮%ನಷ್ಟು implement ಆಗುವಂತಹ ಸಾಧ್ಯತೆ ಇದೆ. ಉದಾಹರಣೆಗಾಗಿ ಬೇರೆ ಜಿಲ್ಲೆಗಳಿಗೆ compare ಮಾಡಿದರೆ ಬೆಳಗಾಂನಲ್ಲಿ ನಮಗೆ ಭೂಮಿಯನ್ನು acquisition ಮಾಡುವಂತಹದ್ದು ಬಹಳ ಕಷ್ಟವಾಗುತ್ತದೆ. ಇವತ್ತು ಜುವಾರಿ ಸಿಮೆಂಟ್ ನಮ್ಮ fertilizer factory ಇದರ ಅಂದಾಜು ೫,೫೦೦ ಕೋಟಿ ರೂಪಾಯಿಗಳಲ್ಲಿ ಯೂರಿಯಾ ಮತ್ತು DAP ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಭೂಮಿಯನ್ನು acquisition ಮಾಡುವುದಕ್ಕೆ ಅಂದಾಜು ಸುಮಾರು ೫೦೦ ಕೋಟಿ ರೂಪಾಯಿಗಳಷ್ಟು ಅವರು ನಮಗೆ deposit ಮಾಡಿದ್ದರು. ನಾವು ಕಳೆದ ಎರಡು ವರ್ಷಗಳಿಂದ ಸತತವಾಗಿ ಪ್ರಯತ್ನವನ್ನು ಮಾಡಿದರು ಸಹ ಇಡೀ ಬೆಳಗಾಂ ಜಿಲ್ಲೆಯಲ್ಲಿ ನಮಗೆ ಭೂಮಿ ಸಿಗದೆ ಇರುವುದರಿಂದ ಸಾಕಷ್ಟು ನಮ್ಮ ಇಲಾಖೆಯ ಹಿರಿಯ ಅಧಿಕಾರಿಗಳು ವೈಯಕ್ತಿಕವಾಗಿ ಎಲ್ಲಾ ರೈತರನ್ನು convince ಮಾಡುವಂತಹದ್ದು ಮಾಡಿದ್ದಾರೆ. ನಾವು ಇಲ್ಲಿರುವಂತಹ ಉಸ್ತುವಾರಿ ಮಂತ್ರಿಗಳನ್ನು ಮತ್ತು ಸ್ಥಳೀಯ ಶಾಸಕರನ್ನು ಅವರ ಮನವೊಲಿಸಿ ಭೂಮಿಯನ್ನುತೆಗೆದುಕೊಂಡಿದ್ದೇ ಆದಲ್ಲಿ ಇವತ್ತು ೫,೫೦೦

ಕೋಟಿ ರೂಪಾಯಿಗಳಷ್ಟು ಒಂದು ಯೋಜನೆಯು ಬೆಳಗಾಂ ಜಿಲ್ಲೆಯಲ್ಲಿ ಬರುವಂತಹ ಸಾಧ್ಯತೆಯು ಆಗುತ್ತಿತ್ತು. ಕೇವಲಬೆಳಗಾಂ ಜಿಲ್ಲೆಯಲ್ಲಾ ಉತ್ತರ ಕರ್ನಾಟಕದಲ್ಲಿರುವಂತಹ ಎಲ್ಲಾ ಜಿಲ್ಲೆಗಳಲ್ಲಿಯೂ ಸಹಿತ ಹೆಚ್ಚು ಹೆಚ್ಚು ಬೇರೆ ಎಲ್ಲಾ ಸೆಕ್ಟರ್‌ಗಳ ಕಾರ್ಖಾನೆಗಳು ಬರಬೇಕು. ಏಕೆಂದರೆ ಈಗಾಗಲೇ ಸಾಕಷ್ಟು Universities, Engineering Colleges, I.T. Colleges, I.T.I Colleges, ಮತ್ತು Diploma Collegeಗಳು ನಮ್ಮಲ್ಲಿ ಇವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಅಂದರೆ ಅಂದಾಜು ೬೦,೦೦೦ ಇಂಜಿನಿಯರ್‌ಗಳು ಪ್ರತಿ ವರ್ಷ ಪಾಸಾಗುತ್ತಿದ್ದಾರೆ. ಇಡೀ ದೇಶದಲ್ಲಿ ಹೆಚ್ಚು ಇಂಜಿನಿಯರ್‌ಗಳು ಪಾಸಾಗುವುದು ನಮ್ಮ ಕರ್ನಾಟಕ ರಾಜ್ಯದಲ್ಲಿ. ೧೪,೦೦೦ PhD holders ನಮ್ಮ ಕರ್ನಾಟಕ ರಾಜ್ಯದಲ್ಲಿದ್ದಾರೆ.ಈ ರೀತಿಯಾಗಿಶಿಕ್ಷಣದಲ್ಲಿ ನಾವು ಮೊದಲನೇ ಸ್ಥಾನದಲ್ಲಿರು-ವುದರಿಂದ ಇದು convert ಆದರೆ ಈ ಕೈಗಾರಿಕೆಗಳು ಬರುವುದಕ್ಕೂ ಸಹ ಇಲ್ಲಿ ಬಂಡವಾಳವನ್ನು ಹಾಕುವವರಿಗೆ ನಮಗೆ ಎಲ್ಲಾ ರೀತಿಯಿಂದಲೂ ಅನುಕೂಲತೆಗ ಳು ಸಿಗುತ್ತಿದೆ.ಮಾನ್ಯ ಸದಸ್ಯರಾದ ಶ್ರೀ ಅಭಯ ಪಾಟೀಲ್‌ರವರು ಏನು ಪ್ರಸ್ತಾವನೆಯನ್ನು ತಂದಿದ್ದಾರೆ, ಹಿರಿಯರಾಗಿರುವಂತಹ ಮಾನ್ಯ ಬಿ.ಬಿ.ಜಯಚಂದ್ರರವರುಏನು ಸಲಹೆಗಳನ್ನು ಕೊಟ್ಟಿದ್ದಾರೆ ಅದು ಸೂಕ್ತವಾಗಿ ರುವಂತಹ ಸಲಹೆಯಾಗಿದೆ. ಮುಂದೆ ಬರುವಂತಹ ದಿವಸಗಳಲ್ಲಿ ನಾನು ಈ ಭಾಗದವನೇ ಆಗಿರುವುದರಿಂದ ಹೆಚ್ಚಿಗೆ ಕಾರ್ಖಾನೆಯು ಬರುವುದಕ್ಕೆ ನಾನು ಸಹ ಪ್ರಯತ್ನ ಮಾಡುತ್ತೇನೆ ಮತ್ತು ಸಹಕಾರವನ್ನು ಕೊಡುತ್ತೇನೆ. ಭೂಮಿಯನ್ನು ತೆಗೆದು-ಕೊಳ್ಳುವುದಕ್ಕೆ ಅವರು ಸಹಿತ ಸ್ಥಳೀಯವಾಗಿಸಹಕಾರವನ್ನು ಮಾಡಿದರೆ ಸಾಧ್ಯವಾದಷ್ಟು ಬೇಗನೆಆ ಬಗ್ಗೆ implement ಮಾಡುವ ಕಡೆ ನಾವು ಲಕ್ಷ್ಯವಹಿಸುತ್ತೇವೆ.

ಶ್ರೀ ಅಭಯ್ ಪಾಟೀಲ್:-ಮಾನ್ಯ ಸಚಿವರು ಹೇಳಿದ ಹಾಗೆ ಬೆಳಗಾಂ-ನಿಂದ ಖಾನಾಪುರ್ ರಸ್ತೆಯಲ್ಲಿ ಏನು Golf course ಇದೆ, ಜಮೀನಿನಲ್ಲಿ ಆ

ಪರಿಸ್ಥಿತಿ ಇಲ್ಲ.ಇನ್ನು ಎರಡನೆಯದಾಗಿ ಬೆಳಗಾಂನಿಂದ ೨೫ ಕಿ.ಮೀ. ದೂರದಲ್ಲಿ ಏನು ಸುತಗಟ್ಟಿ ಎಂದು ಇದೆ ಅಲ್ಲಿ ನನಗೆ ತಿಳಿದ ಪ್ರಕಾರ ಸುಮಾರು ೨,೦೦೦ ಎಕರೆಗಿಂತಹೆಚ್ಚಿಗೆ ಸರ್ಕಾರಿ ಭೂಮಿಯೇ ಇದೆ. ಅದನ್ನು ತೆಗೆದುಕೊಂಡು ಮಾಡಬಹುದು.

ಶ್ರೀ ಮುರುಗೇಶ್ ಆರ್.ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಕೇವಲ ಐ.ಟಿ.ಸೆಕ್ಟರ್‌ಗೆ ಸುಮಾರು ೨೦೦೦ ಎಕರೆ acquisition ಮಾಡುವುದು ಕಷ್ಟವಾಗುತ್ತದೆ. ಅಷ್ಟು ದೊಡ್ಡಪ್ರಮಾಣದಲ್ಲಿ idle ಇಡುವಂತಹದ್ದು ಆಗುತ್ತದೆ. ೨೦೦೦ ಎಕರೆ ಜಾಗವನ್ನು acquisition ಮಾಡುತ್ತೇವೆ. ಅಲ್ಲಿ general industries with I.T. and B.T. sectorಗೆಂದು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು.

ಉಪಾಧ್ಯಕ್ಷರು:- ಮಾನ್ಯ ಸದಸ್ಯರು ಮಂಡಿಸಿರುವ ಕೆಳಕಂಡ ನಿರ್ಣಯವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

"ಬೆಳಗಾವಿಯಲ್ಲಿ ಉದ್ಯೋಗಾವಕಾಶಗಳನ್ನುಹೆಚ್ಚುಮಾಡುವ ದೃಷ್ಟಿಯಿಂದ ೨೦೦೦ ಎಕರೆ ಪ್ರದೇಶವನ್ನು ಗುರುತಿಸಿ ಐ.ಟಿ.ಉದ್ಯೋಗಗಳನ್ನು ಸ್ಥಾಪಿಸುವ ಕುರಿತು ಸರ್ಕಾರವು ಬರುವಂತಹ ದಿವಸಗಳಲ್ಲಿ ಪ್ರಾಶಸ್ತ್ಯ ಕೊಡುವ ಬಗ್ಗೆ ಈ ಸದನ ಸರ್ಕಾರವನ್ನು ಒತ್ತಾಯಿಸುತ್ತದೆ. "

ನಿರ್ಣಯದ ಪರವಾಗಿರುವವರು " ಹೌದು " ಎಂದು ಸೂಚಿಸಬೇಕು

ನಿರ್ಣಯದ ವಿರೋಧವಾಗಿರುವವರು " ಇಲ್ಲ " ಎಂದು ಸೂಚಿಸಬೇಕು

ನಿರ್ಣಯವು "ಹೌದು " ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ನಿರ್ಣಯವು "ಹೌದು"ಎನ್ನುವವರ ಪರವಾಗಿದೆ

ನಿರ್ಣಯವು " ಹೌದು" ಎನ್ನುವವರ ಪರವಾಗಿದೆ

ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಗಿದೆ.